ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	592
ಮಾನ್ಯ ಸದಸ್ಯರ ಹೆಸರು	ಶ್ರೀ ಆರ್. ಧರ್ಮಸೇನ್ (ಸ್ಥಳೀಯ ಸಂಸ್ಥೆಗಳ)
ಉತ್ತರಿಸಬೇಕಾದ ದಿನಾಂಕ	16.09.2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಮದ್ಯದಂಗಡಿಗಳಿಗೆ ಪರವಾನಿಗೆಯನ್ನು ನೀಡಲಾಗಿದೆ; ಹಾಲಿ ಎಷ್ಟು ಮದ್ಯದಂಗಡಿಗಳು ಇವೆ;	2021-22ನೇ ಸಾಲಿಗೆ (ಜುಲೈ ಅಂತ್ಯಕ್ಕೆ) ಪರವಾನಗಿಯನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ ಮದ್ಯದಂಗಡಿಗಳ ಒಟ್ಟು ಸಂಖ್ಯೆ 11,331.
ಆ)	ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿರುವ ಮದ್ಯದಂಗಡಿಗಳ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನೆರೆ ರಾಜ್ಯಗಳಾದ ಕೇರಳ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿರುವ ಅಬಕಾರಿ ಸನ್ನದುಗಳ ಸಂಖ್ಯೆಯನ್ನು ವಿಶ್ಲೇಷಿಸಲಾಗಿ, ಮಹಾರಾಷ್ಟ್ರ ರಾಜ್ಯದಲ್ಲಿ ಸುಮಾರು 25,000 ವಿವಿಧ ಬಗೆಯ ಅಬಕಾರಿ ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕ ರಾಜ್ಯದಲ್ಲಿನ ಅಬಕಾರಿ ಸನ್ನದುಗಳ ಸಂಖ್ಯೆಗೆ ಹೋಲಿಸಿದಲ್ಲಿ ಎರಡು ಪಟ್ಟಿಗಿಂತ ಹೆಚ್ಚಿನ ಸಂಖ್ಯೆಯ ಸನ್ನದುಗಳನ್ನು ಹೊಂದಿದೆ.
ಇ)	ಮದ್ಯಪಾನದಿಂದ ಸಾಮಾಜಿಕವಾಗಿ ಜನ ಜೀವನಕ್ಕೆ ಹಾನಿಯಾಗುತ್ತಿದ್ದು ಸಮಾಜದ ಸ್ವಾಸ್ಥ್ಯ ಕಾಪಾಡುವ ಉದ್ದೇಶದಿಂದ ಇವುಗಳ ಸಂಖ್ಯೆ ಕಡಿಮೆ ಮಾಡಲು ಹಾಗೂ ಪರವಾನಗಿಯನ್ನು ಇನ್ನೂ ಮುಂದೆ ನೀಡದಂತೆ ಕ್ರಮಕೈಗೊಳ್ಳಲಾಗುವುದೇ?	ಸರ್ಕಾರದ ನೀತಿ ನಿರ್ಣಯದ ಭಾಗವಾಗಿ 1992 ರಿಂದ ರಾಜ್ಯದಲ್ಲಿ ಯಾವುದೇ ಹೊಸ ಸಿಎಲ್-2 (ಚಿಲ್ಲರೆ ಮದ್ಯದಂಗಡಿ) ಮತ್ತು ಸಿಎಲ್-9 (ಬಾರ್ & ರೆಸ್ಟೋರೆಂಟ್) ಸನ್ನದುಗಳನ್ನು ನೀಡಲಾಗುತ್ತಿಲ್ಲ. ಅಬಕಾರಿ ಇಲಾಖೆಯಿಂದ ನಿರ್ದಿಷ್ಟ ಉದ್ದೇಶಗಳಿಗಾಗಿ ಅವಶ್ಯಕವಿರುವ ಸಿಎಲ್-4 ಸನ್ನದು (ಕ್ಲಬ್), ಸಿಎಲ್-7 ಸನ್ನದು (ಹೋಟೆಲ್ ಅಂಡ್ ಬೋರ್ಡಿಂಗ್ ಹೌಸ್) ಮತ್ತು ಸಿಎಲ್-6ಎ (ಸ್ಟಾರ್ ಹೋಟೆಲ್), ಸಿಎಲ್-11(ಸಿ) (ಎಂ.ಎಸ್.ಐ.ಎಲ್) ಸನ್ನದುಗಳನ್ನು ಮಾತ್ರ ನೀಡಲಾಗುತ್ತಿದೆ.

ಆಇ 86 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು